# ಚಿತ್ರನಗರಿ ಮತ್ತು ಕಲ್ಯಾಣ ಕರ್ನಾಟಕ: ಸಂಕಟಗಳ ಕಾಲದ ಬಣ್ಣದ ಪುಗ್ಗೆಗಳು

**ಸಂಸ್ಕೃತಿಯ ಬಗ್ಗೆ ಹುಸಿಭಾವುಕತೆಯನ್ನು ಬಿತ್ತುವ ರಾಜಕಾರಣಿಗಳು ಹಾಗೂ ಅವರು ಪ್ರತಿನಿಧಿಸುವ ಸರ್ಕಾರಗಳಿಗೆ, ಆನೆಗುಂದಿಯಾಗಲೀ ರೋರಿಚ್–ದೇವಿಕಾರಾಣಿ ಎಸ್ಟೇಟ್ ಆಗಲೀ ಕೇವಲ ರಿಯಲ್ ಎಸ್ಟೇಟ್ ಚಟುವಟಿಕೆಯ ರೂಪದಲ್ಲಷ್ಟೇ ಕಾಣಿಸುತ್ತವೆ.**

ರಾಜಕಾರಣಿಗಳ ಸಾಂಸ್ಕೃತಿಕ ಅವಜ್ಞೆ ಹಾಗೂ ಇತಿಹಾಸದ ಪ್ರಜ್ಞೆಯ ಕುರುಡುತನಕ್ಕೆ ಹೊಸ ಉದಾಹರಣೆ, ಬೆಂಗಳೂರಿನ ಕನಕಪುರ ರಸ್ತೆಯ ತಾತಗುಣಿ ಬಳಿ ಇರುವ ರೋರಿಚ್ ಮತ್ತು ದೇವಿಕಾರಾಣಿ ಎಸ್ಟೇಟ್‌ನಲ್ಲಿ ಚಿತ್ರನಗರಿ ನಿರ್ಮಿಸುವ ಕುರಿತಾದ ಪ್ರಸ್ತಾಪ. 468.33 ಎಕರೆ ಪ್ರದೇಶದ ಈ ಎಸ್ಟೇಟ್, ನಗರಕ್ಕೆ ಹೊಂದಿಕೊಂಡಿರುವ ಅಪೂರ್ವ ಜೈವಿಕತಾಣ. ಅಪರೂಪದ ಸಸ್ಯಸಂಕುಲ ಹಾಗೂ ವನ್ಯಮೃಗಗಳ ಆವಾಸಸ್ಥಾನವಾಗಿರುವ ಈ ಪ್ರದೇಶದಲ್ಲಿ ಚಿತ್ರನಗರಿ ನಿರ್ಮಿಸುವುದೆಂದರೆ, ಕಾಡು ಸವರಿ ರಿಯಲ್ ಎಸ್ಟೇಟ್ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸುವುದೆಂದೇ ಅರ್ಥ. ನಗರಪ್ರದೇಶಕ್ಕೆ ಹೊಂದಿಕೊಂಡಿರುವ ಅರಣ್ಯಪ್ರದೇಶಗಳೇ ವಿರಳವಾಗುತ್ತಿರುವ ಸಂದರ್ಭದಲ್ಲಿ, ರೋರಿಚ್–ದೇವಿಕಾರಾಣಿ ಎಸ್ಟೇಟ್ ಕಾಡನ್ನೂ ನಾಶಮಾಡುವ ರಾಜ್ಯಸರ್ಕಾರದ 'ಭಸ್ಮಾಸುರ ಹಸ್ತ'ದ ಚಿಂತನೆಗೆ ಪರಿಸರಪ್ರಿಯರು ಹಾಗೂ ವನ್ಯಜೀವಿ ತಜ್ಞರಿಂದ ಸಹಜವಾಗಿಯೇ ವಿರೋಧ ವ್ಯಕ್ತವಾಗಿದೆ.

ಬೆಂಗಳೂರನ್ನು ಆವರಿಸಿಕೊಂಡಿರುವ ಪರಿಸರಚಕ್ರಕ್ಕೆ ತಾತಗುಣಿ ಎಸ್ಟೇಟ್ ಕೊಂಡಿರೂಪದಂತಿದೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ, ಗುಳ್ಳಿಗುಡ್ಡ, ಯು.ಎಂ. ಕಾವಲು ಮೂಲಕ ಬಿ.ಎಂ. ಕಾವಲು ಅರಣ್ಯಕ್ಕೆ ಕೊಂಡಿಯಾಗಿರುವ ಈ ಎಸ್ಟೇಟ್ – ಚಿರತೆ, ನೀರುನಾಯಿ, ಕಡವೆ, ಕಾಡುಕುರಿಗಳಂಥ ವನ್ಯಜೀವಿಗಳಿಗೂ ನೆಲೆಯಾಗಿದೆ. ಎಸ್ಟೇಟ್‌ನಲ್ಲಿನ ಕೆರೆ–ಕಟ್ಟೆಗಳು ಪಕ್ಷಿಕಾಶಿ ಸ್ವರೂಪವನ್ನು ಹೊಂದಿವೆ. ಬನ್ನೇರುಘಟ್ಟ ಮತ್ತು ಸಾವನದುರ್ಗ ನಡುವಿನ 'ಆನೆ ಕಾರಿಡಾರ್' ಹಾದುಹೋಗುವುದು ಕೂಡ ಈ ಎಸ್ಟೇಟ್ ಮೂಲಕವೇ. ಇಂಥ ಸೂಕ್ಷ್ಮ ಪ್ರದೇಶದಲ್ಲಿ ಚಿತ್ರನಗರಿಯ ಚಟುವಟಿಕೆಗಳನ್ನು ಕಲ್ಪಿಸಿಕೊಳ್ಳುವುದು ಹೇಗೆ? ಸರ್ಕಾರದ ಇಂಥ ಅವಿವೇಕದ ನಿರ್ಧಾರಗಳೇ ವನ್ಯಮೃಗಗಳ ಸಹಜನೆಲೆಗಳನ್ನು ಕಸಿದುಕೊಂಡು, ಮಾನವ–ಮೃಗಗಳ ಸಂಘರ್ಷ ಉಂಟಾಗಲು ಕಾರಣವಾಗುತ್ತವೆ.

ಪಾರಂಪರಿಕ ಎಸ್ಟೇಟ್ ಅನ್ನು ವಾಣಿಜ್ಯತಾಣವಾಗಿಸಲು ಸರ್ಕಾರ ಉತ್ಸಾಹದಲ್ಲಿರುವ ಸಂದರ್ಭದಲ್ಲೇ, ಯುವ ಸಂಸದ ತೇಜಸ್ವಿ ಸೂರ್ಯ ಬೆಂಗಳೂರಿನ ಜಯನಗರದಲ್ಲಿರುವ ಗ್ರಂಥಾಲಯ ಕಟ್ಟಡದಲ್ಲಿ ತಮ್ಮ ಕಚೇರಿ ಕಂಡುಕೊಳ್ಳುವ ತವಕದಲ್ಲಿದ್ದಾರೆ. ನಿಕಟಪೂರ್ವ ಸಂಸದ ಅನಂತಕುಮಾರ್ ಅವರು ಕಾರ್ಯನಿರ್ವಹಿಸುತ್ತಿದ್ದ ಕಚೇರಿ ತೇಜಸ್ವಿ ಅವರಿಗೆ ಅಪಥ್ಯವಾಗಿದೆ. ಸಂಸದರ ಕಚೇರಿ ಸ್ಥಾಪನೆಯಿಂದ ಗ್ರಂಥಾಲಯದ ಆವರಣದಲ್ಲಿ ಜನಜಂಗುಳಿ ಸಹಜವಾಗಿಯೇ ಹೆಚ್ಚಾಗಿ, ಓದುಗರಿಗೆ ಅಗತ್ಯವಾದ ಮೌನದ ವಾತಾವರಣ ಇಲ್ಲವಾಗುತ್ತದೆ. ಗ್ರಂಥಾಲಯಗಳು ಆಯಾ ಪ್ರದೇಶದ ಸಾಂಸ್ಕೃತಿಕ ಕೇಂದ್ರಗಳಾಗಿದ್ದು, ಅವುಗಳು ಸಂತೆಗಳ ಸ್ವರೂಪ ಪಡೆಯಬಾರದು. ಜಯನಗರದ ಗ್ರಂಥಾಲಯದ ಕಟ್ಟಡಕ್ಕೆ ಸಾಮಾಜಿಕ ಕಾಳಜಿಯ ಆಯಾಮವೂ ಇದ್ದು, ಅಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಉಚಿತ ತರಗತಿಗಳು ನಡೆಯುತ್ತಿವೆ. ಇಂಥ ಸ್ಥಳದಲ್ಲಿ ಕಚೇರಿ ನಿರ್ಮಿಸಿಕೊಳ್ಳಲು ಹೊರಟಿರುವ ಜನಪ್ರತಿನಿಧಿಯ ನಡವಳಿಕೆಯನ್ನು ಪ್ರಜ್ಞಾವಂತರೆಲ್ಲರೂ ವಿರೋಧಿಸಬೇಕು.

ರಷ್ಯಾ ಮೂಲದ ರೋರಿಚ್ ವಿಶ್ವಪ್ರಸಿದ್ಧ ಕಲಾವಿದ. ಅವರ ಪತ್ನಿ ದೇವಿಕಾರಾಣಿ ರಾಷ್ಟ್ರೀಯಮನ್ನಣೆ ಪಡೆದ ಅಭಿನೇತ್ರಿ. ಅಪೂರ್ವ ಕಲಾವಿದ ಜೋಡಿಯ ಸಾಂಸ್ಕೃತಿಕ ನೆನಪುಗಳು ತಾತಗುಣಿ ಎಸ್ಟೇಟ್‌ನಲ್ಲಿವೆ. ಇಂಥ ಪರಿಸರವನ್ನು ಜತನವಾಗಿ ಕಾಪಿಟ್ಟುಕೊಳ್ಳುವ ಹೊಣೆ ಸರ್ಕಾರದ್ದು. ವಿಪರ್ಯಾಸವೆಂದರೆ, ಇಂಥ ಸಾಂಸ್ಕೃತಿಕ ತಾಣಗಳು ಸರ್ಕಾರಗಳ ಕಣ್ಣಿಗೆ ಬರಿಯ ಭೂಮಿಯ ರೂಪದಲ್ಲಷ್ಟೇ ಕಾಣಿಸುತ್ತವೆ. ಸಂಸ್ಕೃತಿಯ ಬಗ್ಗೆ ಹುಸಿಭಾವುಕತೆಯನ್ನು ಬಿತ್ತುವ ರಾಜಕಾರಣಿಗಳು ಹಾಗೂ ಅವರು ಪ್ರತಿನಿಧಿಸುವ ಸರ್ಕಾರಗಳಿಗೆ, ಆನೆಗುಂದಿಯಾಗಲೀ ರೋರಿಚ್–ದೇವಿಕಾರಾಣಿ ಎಸ್ಟೇಟ್ ಆಗಲೀ ಕೇವಲ ರಿಯಲ್ ಎಸ್ಟೇಟ್ ಚಟುವಟಿಕೆಯ ರೂಪದಲ್ಲಷ್ಟೇ ಕಾಣಿಸುತ್ತವೆ. ಸಂಸ್ಕೃತಿ ಎನ್ನುವುದು ಮಣ್ಣಿನ ರೂಪದಲ್ಲೂ ಕಾಡಿನ ರೂಪದಲ್ಲೂ ಇರುತ್ತದೆ ಎನ್ನುವುದು ಈ ರಾಜಕಾರಣಿಗಳಿಗೆ ತಿಳಿಯಬೇಕಾಗಿದೆ.

ರಾಜ್ಯದ ಪ್ರವಾಹಪೀಡಿತ ಪ್ರದೇಶಗಳಲ್ಲಿ ಮಳೆ ನಿಂತಿದ್ದರೂ ಸಂತ್ರಸ್ತರ ಕಣ್ಣೀರು ನಿಂತಿಲ್ಲ. ಪುನರ್ವಸತಿ ಚಟುವಟಿಕೆಗಳಿಗೆ ಸಂಪನ್ಮೂಲ ಹೊಂದಿಸಿಕೊಳ್ಳಲು ಸರ್ಕಾರ ಹೆಣಗುತ್ತಿದೆ. ರಾಜ್ಯದ ಸಂಕಷ್ಟಕ್ಕೆ ಕೇಂದ್ರಸರ್ಕಾರ ಪೂರ್ಣ ಕುರುಡಾಗಿದೆ. ಇಂಥ ಸಂದರ್ಭದಲ್ಲಿ ಜನಪರ–ಜೀವಪರ ಸರ್ಕಾರವೊಂದಕ್ಕೆ ಸಂತ್ರಸ್ತರ ನೋವಿನ ಹೊರತಾಗಿ ಬೇರೇನನ್ನೂ ಯೋಚಿಸುವುದು ಸಾಧ್ಯವಾಗಬಾರದು. ಆದರೆ, ಕರ್ನಾಟಕ ಸರ್ಕಾರಕ್ಕೆ ಚಿತ್ರನಗರಿಯ ಬಗ್ಗೆ ಯೋಚಿಸಲು ಬಿಡುವು ದೊರೆತಿದೆ. ನೆರವಿಗಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಸಾಧ್ಯವಾಗದ ಸಂಸದರಿಗೆ ಕಿರುತೆರೆಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಮನಸ್ಸು ಒಪ್ಪುತ್ತದೆ. ಸೂರು ಕಳೆದುಕೊಂಡಿರುವ ಜನರು ಬೀದಿಪಾಲಾಗಿರುವ ಸಂದರ್ಭದಲ್ಲಿ ಸರ್ಕಾರ 'ಕಲ್ಯಾಣ ಕರ್ನಾಟಕ'ದ ಘೋಷಣೆ ಹೊರಡಿಸುತ್ತದೆ. ಎಲ್ಲಿದೆ ಕಲ್ಯಾಣ? ಅದು ಯಾರ ಕಲ್ಯಾಣ?

ನೆರೆಪೀಡಿತರಿಗೆ ನೆರವಾಗಲೆಂದು 'ಕೋಟ್ಯಧಿಪತಿ' ಕಾರ್ಯಕ್ರಮದಲ್ಲಿ ಹಣ ಗೆಲ್ಲಲು ಪ್ರಯತ್ನಿಸುವ ನಮ್ಮ ರಾಜಕಾರಣಿಗಳ ಕರ್ತವ್ಯನಿಷ್ಠೆಯನ್ನು ನೋಡಿದರೆ, ಸಂತ್ರಸ್ತ ಜನರಿಗೆ 'ಲಾಟರಿ'ಯೇ ಗತಿಯೆನ್ನಿಸುತ್ತದೆ.

■ **ರಘುನಾಥ ಚ.ಹ.**



ಈಶ್ವರ